# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5050/2024 ಫ್ರಾಸಾ-4
ಚಾಸಾ-4

ದಿನಾಂಕಃ 15-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ನಾರಾಯಣಪ್ಪ |
| **ತಂದೆಯ / ಗಂಡನ ಹೆಸರು** | ನರಸಪ್ಪ |
| **ವಯಸ್ಸು** | 50 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ಕೆ. ರಾಂಪುರ, ಪಾವಗಡ ತಾಲ್ಲೂಕು |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಆರೋಪಿಯ ಪರಿಚಯ ಇರುತ್ತದೆ. ಆತನ ಹೆಂಡತಿ ಹೆಸರು ಆದಿಲಕ್ಷ್ಮಮ್ಮ. ಆದಿಲಕ್ಷ್ಮಮ್ಮ ಒಂದು ವರ್ಷ ಹಿಂದೆ ತೀರಿಕೊಂಡಿರುತ್ತಾರೆ. ಆದಿಲಕ್ಷ್ಮಮ್ಮನಿಗೆ ಏನು ಆಗಿ ತೀರಿಕೊಂಡಿರುತ್ತಾಳೆಂದು ಎಂದು ನನಗೆ ಗೊತ್ತಿಲ್ಲ. ನನ್ನ ಮನೆ ಆರೋಪಿಯ ಮನೆಯ ಪಕ್ಕ ಇರುತ್ತದೆ. ಆದಿಲಕ್ಷ್ಮಮ್ಮನ ಹೇಗೆ ತೀರಿಕೊಂಡಿರುತ್ತಾರೆ , ಏಕೆ ತೀರಿಕೊಂಡಿರುತ್ತಾಳೆ ಅವಳ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಆರೋಪಿ ರಮೇಶ ಏಕೆ ಜೈಲಿನಲ್ಲಿರುತ್ತಾನೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ಆರೋಪಿಗೆ ಮದ್ಯ ಕುಡಿಯುವ ಅಭ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಆಗಾಗ ತನ್ನ ಹೆಂಡತಿ ಆದಿಲಕ್ಷ್ಮಮ್ಮಳಿಗೆ ಕುಡಿಯಲು ಹಣ ಕೇಳುತ್ತಿದ್ದ ಹಣ ಕೊಡದೇ ಇದ್ದರೆ

**ಚಾಸಾ-4**

ಜಗಳ ಮಾಡುತ್ತಿದ್ದ ಎಂದರೆ ಸರಿಯಲ್ಲ. ದಿ. 12.08.2024 ರಂದು ಮಧ್ಯಾಹ್ನ 11-30 ಗಂಟೆಗೆ ರಮೇಶ ಕುಡಿದು ಆತನ ಹೆಂಡತಿ ಮೇಲೆ ಗಲಾಟೆ ಮಾಡುತ್ತಿದ್ದನು ಇವನದು ದಿನೇ ಇದ್ದದ್ದೆ ಎಂದು ನಾನು ನೋಡಿಕೊಂಡು ಮನೆಗೆ ಹೋದೇನು ಎಂದೆರ ಸರಿಯಲ್ಲ. ನಂತರ ಮಧ್ಯಾಹ್ನ 12-00 ಗಂಟೆಗೆ ಚಾಸಾ-2 ಜೊರಾಗಿ ಕಿರುಚಿದಾಗ ನಾನು ಮನೆ ಹತ್ತಿರ ಹೋಗಿ ನೋಡಲಾಗಿ ಆದಿಲಕ್ಷ್ಮಮ್ಮ ನೆಲದ ಮೇಲೆ ಅವರ ಮನೆಯಲ್ಲಿ ರಕ್ತದ ಮಡುವಿನಲ್ಲಿ ಹೊರಳಾಡುತ್ತಿದ್ದಳು, ತಲೆಯಿಂದ ರಕ್ತ ಸುರಿಯುತ್ತಿತ್ತು, ಆಗ ನಾನು ಗಂಗಮ್ಮಳಿಗೆ ಕೇಳಿದಾಗ ಅವಳು ಆರೋಪಿ ಮದ್ಯ ಕುಡಿಯಲು ಹಣ ಕೊಡದೇ ಇದ್ದಾಗ ಆದಿಲಕ್ಷ್ಮಮ್ಮನಿಗೆ ಟಿವಿ ನೋಡಿಕೊಂಡು ಬಟ್ಟೆ ಮಡುಚುತ್ತಿದ್ದಾಗ ಚಿಕ್ಕ ಒಣಕೆಯಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾನೆ ಎಂದು ಹೇಳಿದಳು ಎಂದರೆ ಸರಿಯಲ್ಲ.

ಆಂಬುಲೆಯನ್ಸ್ ನಲ್ಲಿ ಚಾಸಾ-1 ಮತ್ತು 3 ಆಸ್ಪತ್ರೆಗೆ ಪಾವಗಡ ಆಸ್ಪತ್ರೆಗೆ ಕರೆದುಕೊಂಡು ಹೋದರು , ನಂತರ ನಿಮಾನ್ಸ್ ಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಆದಿಲಕ್ಷ್ಮಮ್ಮ ತೀರಿಕೊಂಡಳು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಓದಿ ಹೇಳಿದ ಹೇಳಿಕೆ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಆದಿಲಕ್ಷ್ಮಮ್ಮಳ ಸಾವಿಗೆ ಆರೋಪಿಯೇ ಕಾರಣ ಎಂದು ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀಸವಾಲು.ಶ್ರೀ. ಬಿ.ಬಿ.ಎಂ. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**